ಶ್ರೀ ಪಿ. ಜಿ. ಆರ್. ಸಿಂಧ್ಯ(ಸಮಾಜ ಕಲ್ಯಾಣ ಸಚಿವರು).—

ಅ) ಮೆಟ್ರಿಕ್ ಪೂರ್ವ ವಿದ್ಯಾರ್ಥಿನಿಲಯಗಳು—೬೫೩

ಮೆಟ್ರಿಕ್ ನಂತರದ ವಿದ್ಯಾರ್ಥಿನಿಲಯಗಳು—೬೭

ಆ) ಸರ್ಕಾರದ ಕಟ್ಟಡದಲ್ಲಿ ೧೫೩ ವಸತಿ ನಿಲಯಗಳು ಬಾಡಿಗೆ ಕಟ್ಟಡಗಳಲ್ಲಿ ೫೬೪ ವಸತಿ ನಿಲಯಗಳು ನಡೆಯುತ್ತಿವೆ.

ಇ)

	ತೆರೆಯಲಿಚ್ಛಿಸಿದ್ದ ವಿದ್ಯಾರ್ಥಿನಿಲಯಗಳು	ತೆರೆದಿರುವ ವಿದ್ಯಾರ್ಥಿನಿಲಯಗಳು
೧೯೮೭-೮೮	೨೫	೨೫
೧೯೮೮-೮೯	೫೦	೧೮

ಈ) ೨೨.೭೦ ಲಕ್ಷರೂ.ಗಳು.

ಹೆಗ್ಗಡದೇವನಕೋಟೆ ತಾಲ್ಲೂಕಿನಲ್ಲಿ ವಿಶೇಷ ಘಟಕ ಯೋಜನೆಯಡಿಹಣದ ದುರುಪಯೋಗ

೮೩೪. ಶ್ರೀ ಎಂ. ಶಿವಣ್ಣನವರ (ಹೆಗ್ಗಡ ದೇವನ ಕೋಟೆ).—ಮಾನ್ಯ ಸಮಾಜ ಕಲ್ಯಾಣ ಯುವಜನ ಸೇವಾ ಮತ್ತು ಕ್ರೀಡಾ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಹೆಗ್ಗಡದೇವನ ಕೋಟೆ ತಾಲ್ಲೂಕು ಕೆಲವು ಗ್ರಾಮಗಳಿಗೆ ವಿಶೇಷ ಘಟಕ ಯೋಜನೆಯಲ್ಲಿ ಸೌಲಭ್ಯ ನೀಡುವಾಗ ಕೆಲವು ಅಧಿಕಾರಿಗಳು ದುರುಪಯೋಗ ಮಾಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಆ) ಹಾಗಿದ್ದಲ್ಲಿ ಯಾವ ಗ್ರಾಮಗಳಲ್ಲಿ ಯಾವ ಯಾವ ರೀತಿ ದುರುಪಯೋಗ ಮಾಡಲಾಗಿದೆ,

ಇ) ಈ ಬಗ್ಗೆ ಸರ್ಕಾರ ತೆಗೆದುಕೊಂಡಿರುವ ಕ್ರಮವೇನು ?

ಶ್ರೀ ಪಿ. ಜಿ. ಆರ್. ಸಿಂಧ್ಯ(ಸಮಾಜ ಕಲ್ಯಾಣ. ಯುವಜನ ಸೇವಾ ಮತ್ತು ಕ್ರೀಡಾ ಸಚಿವರು).—

ಅ) ಇಲ್ಲ.

ಆ) ಉದ್ಭವಿಸುವುದಿಲ್ಲ.

ಇ) ಉದ್ಭವಿಸುವುದಿಲ್ಲ,

ಕರ್ನಾಟಕದಲ್ಲಿ ದೇವದಾಸಿಯರ ಪದ್ಧತಿಯನ್ನು ತಡೆಗಟ್ಟಿಯುವಲ್ಲಿ ಸರ್ಕಾರದ ವಿಫಲತೆ

೮೪೦. ಶ್ರೀ ಮಲ್ಲಾರಿಗೌಡ ಎಸ್. ಪಾಟೀಲ (ಸಂಕೇಶ್ವರ).—ಮಾನ್ಯ ಸಮಾಜ ಕಲ್ಯಾಣ ಯುವಜನ ಸೇವಾ ಮತ್ತು ಕ್ರೀಡಾ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ

ಅ) ದೇವದಾಸಿ ಪದ್ಧತಿ ಹಾಗೂ ಮೂಡನಂಬಿಕೆ ನಿವಾರಿಸಲು ಪವಿತ್ರ ರೇಣುಕಾ ಎಲ್ಲಮ್ಮನ ಗುಡ್ಡದ ಮೇಲೆ ಸಾಮಾಜಿಕ ಸಂಶೋಧನಾ ಕೇಂದ್ರವನ್ನು ಹಾಗೂ ಶಿಕ್ಷಣ ಕೇಂದ್ರವನ್ನು ಸ್ಥಾಪಿಸಿದು ನಿಜವೇ ?

ಆ) ಸೌವದತ್ತಿ ಎಲ್ಲಮ್ಮನ ದೇವಸ್ಥಾನದಲ್ಲಿ ಈ ವರ್ಷ ದೇವದಾಸಿಯರನ್ನು ಬಿಟ್ಟಿದ್ದು ಪತ್ರಿಕೆಗಳಲ್ಲಿ ಬಂದಿದ್ದು ನಿಜವೇ , ಹಾಗಿದ್ದಲ್ಲಿ, ಈ ವಿಫಲತೆಗೆ ಕಾರಣರಾರು ?

ಇ) ಕಳೆದ ವರ್ಷಗಳಲ್ಲಿ ಎಷ್ಟು ದೇವದಾಸಿಯರನ್ನು ಗುರುತಿಸಿ ಮಾಶಾಸನ ಮಂಜೂರು ಮಾಡಲಾಗಿದೆ. (ಜಿಲ್ಲಾವಾರು ವಿವರಣೆನ್ನೊದಗಿಸುವುದು)

ಶ್ರೀ ಪಿ. ಜಿ. ಆರ್. ಸಿಂಧ್ಯ(ಸಮಾಜ ಕಲ್ಯಾಣ ಮಂತ್ರಿಗಳು).—

ಬ) ಇಲ್ಲ.

ಆ) ಪತ್ರಿಕಾ ವರದಿಗಳ ಪ್ರಕಾರ ಈ ಪರ್ಷವೂ ಸಹ ದೇವದಾಸಿಯರಾಗಿ ಸಮರ್ಪಣಾ ಕಾರ್ಯ ಜರುಗಿರುವುದೆಂದು ತಿಳಿಸಿರುವ ವಿಷಯ ಸತ್ಯಕ್ಕೆ ದೂರವಾದದ್ದು. ವಿಫಲತೆಯ ಪ್ರಶ್ನೆಯೇ ಉದ್ಭವಿಸುವುದಿಲ್ಲ.

ಇ) ದೇವದಾಸಿ ಮಹಿಳೆಯರಿಗೆ ಪುನರ್ವಸತಿ ನೀಡುವ ಯೋಜನೆಯು ಇಲ್ಲದಿರುವುದರಿಂದ ಈ ಪ್ರಶ್ನೆ ಉದ್ಭವಿಸುವುದಿಲ್ಲ.

ರಾಜ್ಯ ರಸ್ತೆ ಸಾರಿಗೆ ನಿಗಮ ಅನುಭವಿಸಿದ ನಷ್ಟದ ಬಗೆ

೮೪೧. ಶ್ರೀ ಜಿ. ರಾಮಸ್ವಾಮಿಗೌಡ(ಹನೂರು). —ಪುನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯೆ ಮಿಟ್ಟು ಉತ್ತರಿಸುವರೇ ?

ಅ) ೧೯೮೬-೮೭, ೧೯೮೭-೮೮ ಮತ್ತು ೧೯೮೮-೮೯ನೇ ಸಾಲಿನಲ್ಲಿ ರಾಜ್ಯದ ರಸ್ತೆ ಸಾರಿಗೆ ನಿಗಮವು ಅನುಭವಿಸಿರುವ ನಷ್ಟ ಎಷ್ಟು ?

ಆ) ನಷ್ಟವನ್ನು ತಗ್ಗಿಸಲು ಕೈಗೊಂಡಿರುವ ಕ್ರಮಗಳೇನು ?

ಶ್ರೀ ಸಿದ್ದರಾಮಯ್ಯ (ಸಾರಿಗೆ ಮಂತ್ರಿಗಳು).—

೧೯೮೬-೮೭, ೧೯೮೭-೮೮ ಮತ್ತು ೧೯೮೮-೮೯ನೇ ಸಾಲಿನ ಫೆಬ್ರುವರಿ ತಿಂಗಳಿನವರೆಗಿನ ಅಂದಾಜು ನಷ್ಟದ ಅಂಕಿಗಳನ್ನು ಈ ಕೆಳಗೆ ಕೊಡಲಾಗಿದೆ.

ವರ್ಷ	ಮೊತ್ತ (ಲಕ್ಷ ರೂ. ಗಳಲ್ಲಿ)
೧೯೮೬-೮೭	೭೯೭.೭೦
೧೯೮೭-೮೮	೪೯೯ ೫೯
೧೯೮೮-೮೯ (ಅಂದಾಜು) (ಫೆಬ್ರುವರಿ ೧೯೮೯ರ ವರೆಗೆ	೮೪೫.೯೧

ಆ) ನಷ್ಟವನ್ನು ತಗ್ಗಿಸಲು ಈ ಕೆಳಗೆ ಪಟ್ಟಿಮಾಡಿರುವ ಕ್ರಮಗಳನ್ನು ಕೈಗೊಳ್ಳಲಾಗಿದೆ.—

೧) ಹೆಚ್ಚಿನ ಸಾರಿಗೆ ಆದಾಯ ಗಳಿಸಲು ನಿರ್ವಾಹಕ ಮತ್ತು ಚಾಲಕರ ಮಾರ್ಗ ಬದಲಾವಣೆ ಪದ್ಧತಿಯಲ್ಲಿ ತರಲಾದ ಸುಧಾರಣೆ.

೨) ಪರಿಣಾಮಕಾರಿಯೆಂದುಕೊಂಡು ಬಂದ ಕೆಲವು ಆಯ್ದ ವಿಧಾನಗಳನ್ನನುಸರಿಸಿ, ಮಾರ್ಗ ತನಿಖಾ ದಳಗಳನ್ನು ಬಲಪಡಿಸಲಾಗಿದೆ.

೩) ವಾಹನಗಳಿಂದ ಹೆಚ್ಚಿನ ಕಿ. ಮೀ. ಪಡೆದು ಪ್ರತಿ ಕಿ. ಮೀ. ಕಾರ್ಯಚರಣೆ ವೆಚ್ಚವನ್ನು ತಗ್ಗಿಸಲಾಗಿದೆ.

೪) ಇಂಧನ ಮೆಚ್ಚುದಲ್ಲಿ ಮಿತ ಸಾಧಿಸಲು, ಉತ್ತಮ ಇಂಧನ ನಿರ್ವಹಣೆಯ ಹಿನ್ನೋ ಯಂತ್ರ ಗಳನ್ನು ವಾಹನಗಳಿಗೆ ಅಳವಡಿಸಲಾಗಿದೆ ಮತ್ತು ಅಲ್ಯೂಮಿನಿಯಂ ವಾಹನಗಳನ್ನು ನಿರ್ಮಿಸ ಲಾಗುತ್ತಿದೆ.

೫) ನಿರ್ವಹಣಾ ಪದ್ಧತಿಯಲ್ಲಿನ ಸುಧಾರಣೆ, ಹೊಸ ಹಾಗೂ ಸಂಸ್ಕರಿಸಿದ ಟಯರ್‌ಗಳ ಸರಿಯಾದ ಪ್ರಮಾಣದ ಬಳಕೆ ಮತ್ತು ಬಳಸಿದ ಟಯರಿನಿಂದ ಹೆಚ್ಚಿನ ಕಿ. ಮೀ. ಗಳಿಕೆಯಿಂದಾಗಿ ಟಯರ್ ಬಾಬ್ತಿನ ವೆಚ್ಚವನ್ನು ಹಿಡಿತದಲ್ಲಿಡಲಾಗಿದೆ.

೬) ಮೂರು ಹಂತ ನಿರ್ವಹಣಾ ಪದ್ಧತಿಯ ಬದಲು ಎರಡು ಹಂತ ನಿರ್ವಹಣಾ ಪದ್ಧತಿ ಯನ್ನು ಅಳವಡಿಸಿಕೊಂಡು, ವಾಹನಗಳು ಮಾರ್ಗದ ಮಧ್ಯದಲ್ಲಿ ಕೆಟ್ಟುನಿಲ್ಲುವಿಕೆ ಮತ್ತು ಅನಾಸೂಚಿ ಕಿ. ಮೀ. ರದ್ದತಿಯನ್ನು ಕನಿಷ್ಟ ಮಟ್ಟದಲ್ಲಿರಿಸಲಾಗಿದೆ.

೭) ಕಾರ್ಯಾಚರಣೆ ಮುಂಗಡ ಪತ್ರದಲ್ಲಿ ನಿಗದಿತ ಪಡಿಸಿದ ಗುರಿಯನ್ನು ಅಳತೆಗೋಲಾಗಿರಿಸಿ ಕೊಂಡು ವಿಭಾಗಗಳ ಕಾರ್ಯ ಕುಶಲತೆಯನ್ನು ವಿವಿಧ ಹಂತಗಳಲ್ಲಿ ಅಲ್ಲಲ್ಲಿ ಸಮೀಕ್ಷಿಸಲಾಗುತ್ತಿದೆ.